# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಚಾಮರಾಜನಗರ ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣಾ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಮೆಡಿಕಲ್ ಕಿಟ್ ಮತ್ತು ಬೋರ್ಡ್ ಖರೀದಿಯಲ್ಲಿನ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ ಆದೇಶ.

ಓದಲಾಗಿದೆ: (1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯತಿ, ಚಾಮರಾಜನಗರ ಇವರ ಪತ್ರ ಸಂಖ್ಯೆ:ಜಿಪಂಚಾ:ಉಖಾಯೋ:26:2012-13, ದಿ:04-7-2013.

(2) ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ 70 ವಿಸೇಬಿ 2012, ದಿನಾಂಕ:19-11-2013.

(3) ಅಪಾದಿತರ ಲಿಖಿತ ಹೇಳಿಕೆ ದಿನಾಂಕ:03-04-2017.

-000-

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಸಂಖ್ಯೆ:(1)ರ ದಿನಾಂಕ:04-7-2013 ರ ಪತ್ರದಲ್ಲಿ ಚಾಮರಾಜನಗರ ಜಿಲ್ಲೆಯ 2010-11ನೇ ಸಾಲಿನಲ್ಲಿ ವಿವಿಧ ಗ್ರಾಮ ಪಂಚಾಯತಿಗಳಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಲ್ಲಿ ನಾಮಫಲಕಗಳು, ಎಸ್.ಎಂ.ಎಸ್ ಸ್ಟಾರ್ಟರ್ ಮತ್ತು ಮೆಡಿಕಲ್ ಕಿಟ್‌ಗಳ ಖರೀದಿಯಲ್ಲಿ ಮಾರುಕಟ್ಟೆ ದರಕ್ಕಿಂತ ಹೆಚ್ಚುವರಿಯಾಗಿ ಹಣ ಪಾವತಿಸಿರುವ ಮತ್ತು ಪಾರದರ್ಶಕ ನಿಯಮಗಳನ್ನು ಪಾಲಿಸದೆ ಇರುವ ಹಾಗೂ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಹಣ ದುರುಪಯೋಗ/ಕರ್ತವ್ಯ ಲೋಪವನ್ನು ಎಸಗಿರುವ ಮತ್ತು ಇತರೆ ಆರೋಪಗಳಿಗೆ ಸಂಬಂಧಿಸಿದಂತೆ 5 ಜನ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಒಳಗೊಂಡಂತೆ 30 ಜನ ಕಾರ್ಯದರ್ಶಿ/ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕರ್ತವ್ಯ ನಿರ್ಲಕ್ಷತೆ ತೋರಿರುವ ಸದರಿ ಪ್ರಕರಣಕ್ಕೆ ಸಂಬಂಧಿಸಿದ ದುರುಪಯೋಗಕ್ಕೆ ಕಾರಣರಾಗಿ, ಸರ್ಕಾರಿ ನೌಕರರಿಗೆ ತರವಲ್ಲದೆ ರೀತಿಯಲ್ಲಿ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮಾವಳಿ 1966ರ ನಿಯಮ 3(1)ರ ಉಪನಿಯಮ (i),(ii),(iii) ಅನ್ನು ಉಲ್ಲಂಘಿಸಿರುರುವ ಆರೋಪಗಳಿಗೆ ಸಂಬಂಧಿಸಿದಂತೆ ಸದರಿ ಅಧಿಕಾರಿಯ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಾಮರಾಜನಗರ ರವರು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಪ್ರಕರಣದಲ್ಲಿ ಸರ್ಕಾರದ ಮಾರ್ಗ ಸೂಚಿಗಳನ್ನು ಉಲ್ಲಂಘಿಸಿ ಕರ್ತವ್ಯ ನಿರ್ಲಕ್ಷತೆ ತೋರಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿ/ನೌಕರರುಗಳಿಗೆ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಗಳು 1957ರ ನಿಯಮ 11 ರಡಿಯಲ್ಲಿ ಕಾರಣ ಕೇಳುವ ನೋಟಿಸಿನೊಂದಿಗೆ ದೋಷಾರೋಪಣ ಪಟ್ಟಿಯನ್ನು ದಿ:19-11-2013 ರಂದು ಜಾರಿಗೊಳಸಲಾಗಿತ್ತು.

ಸದರಿ ನೋಟೀಸ್‌ಗೆ, ಪ್ರಕರಣದಲ್ಲಿ ಭಾಗಿಯಾಗಿರುವ ಕೆಲವು ಅಧಿಕಾರಿ/ನೌಕರರುಗಳು ಲಿಖಿತ ಹೇಳಿಕೆಯನ್ನು ಸಲ್ಲಿಸುತ್ತಾ, ಸರ್ಕಾರಕ್ಕೆ ನಷ್ಟವಾದ ಪೂರ್ಣ ಹಣ ಪಾವತಿಸಿರುತ್ತಾರೆ. ಈ ಕೆಳಕಂಡ 8 ನೌಕರರುಗಳ ಪೈಕಿ 4 ನೌಕರರುಗಳು ದೋಷಾರೋಪಣೆಯಲ್ಲಿ ಪ್ರಸ್ತಾಪಿಸಿರುವ ಮೊತ್ತಕಿಂತ ಕಡಿಮೆ ಹಣ ಪಾವತಿಸಿರುವುದರಿಂದ ಹಾಗೂ 4 ನೌಕರರುಗಳು ದೋಷಾರೋಪಣಾ ಪಟ್ಟಿಗೆ ಲಿಖಿತ ಹೇಳಿಕೆ ಸಲ್ಲಿಸದೆ ಇರುವುದರಿಂದ ಆಪಾದಿತರ ವಿರುದ್ಧದ ಮಾಡಲಾದ ಆರೋಪಗಳ

ಸತ್ಯಾಸತ್ಯತೆಯನ್ನು ತಿಳಿಯುವ ಸಲುವಾಗಿ ಇಲಾಖಾ ವಿಚಾರಣೆಯನ್ನು ನಡೆಸಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀ ಭಾಸ್ಕರ್ ಅಡಿಗ | ಗ್ರಾ.ಪಂ ಕಾರ್ಯದರ್ಶಿ |
| 2 | ಶ್ರೀ ಬಿ.ಜಿ.ಶೇಖರಪ್ಪ | ಗ್ರಾ.ಪಂ ಕಾರ್ಯದರ್ಶಿ |
| 3 | ಶ್ರೀ ನೀಲಯ್ಯ | ಗ್ರಾ.ಪಂ ಕಾರ್ಯದರ್ಶಿ |
| 4 | ಶ್ರೀ ಸಿ.ಎಸ್.ಕೃಷ್ಣಮೂರ್ತಿ | ಪಂ.ಅಭಿವೃದ್ಧಿ ಅಧಿಕಾರಿ |
| 5 | ಶ್ರೀ ಚಿಕ್ಕಮಾದಯ್ಯ | ಗ್ರಾ.ಪಂ ಕಾರ್ಯದರ್ಶಿ |
| 6 | ಶ್ರೀ ಮಾದಯ್ಯ | ಗ್ರಾ.ಪಂ ಕಾರ್ಯದರ್ಶಿ |
| 7 | ಶ್ರೀ ಬಸವಣ್ಣ ಎಂ | ಗ್ರಾ.ಪಂ ಕಾರ್ಯದರ್ಶಿ |
| 8 | ಶ್ರೀ ರಾಮು | ಪಂ.ಅಭಿವೃದ್ಧಿ ಅಧಿಕಾರಿ |

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 70 ವಿಸೇಬಿ 2012 ಬೆಂಗಳೂರು,ದಿನಾಂಕ:22-06-2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಸರ್ಕಾರವು ಪ್ರಕರಣದಲ್ಲಿ ಬಾಗಿಯಾಗಿರುವ 08 ಜನ ಕಾರ್ಯದರ್ಶಿ/ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11 ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಆದೇಶಿಸಿದೆ.

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11 ರ ಪ್ರಕಾರ ಇಲಾಖಾ ವಿಚಾರಣೆಯನ್ನು ನಡೆಸಲು, ಅದೇ ನಿಯಮಾವಳಿಗಳ ನಿಯಮ 11(2) ರ ಪ್ರಕಾರ ಉಪ ಕಾರ್ಯದರ್ಶಿ(ಆಡಳಿತ) ಜಿಲ್ಲಾ ಪಂಚಾಯತ್ ಚಾಮರಾಜನಗರ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದೆ.

ಶಿಸ್ತು ಪ್ರಾಧಿಕಾರಿಯ ಪರವಾಗಿ ಪ್ರಕರಣವನ್ನು ವಿಚಾರಣಾಧಿಕಾರಿಯವರ ಮುಂದೆ ಮಂಡಿಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11(5)(ಸಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಹಾಯಕ ಕಾರ್ಯದರ್ಶಿ ಜಿಲ್ಲಾ ಪಂಚಾಯತಿ, ಚಾಮರಾಜನಗರ ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಿದೆ.

ವಿಚಾರಣಾಧಿಕಾರಿಯವರು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರಲ್ಲಿ ನಿಗದಿ ಪಡಿಸಿರುವ ಕಾರ್ಯವಿಧಾನದ ಪ್ರಕಾರ ಇಲಾಖಾ ವಿಚಾರಣೆ ಜರುಗಿಸಿ ಪ್ರತಿಯೊಬ್ಬ ಆಪಾದಿತ ನೌಕರರ ವಿರುದ್ಧದ ಪ್ರತಿಯೊಂದು ಆರೋಪಗಳು ಸಾಬೀತಾಗಿರುವ / ಸಾಬೀತಾಗಿಲ್ಲದಿರುವ ಬಗ್ಗೆ ಸ್ಪಷ್ಟ ಅಭಿಪ್ರಾಯದೊಂದಿಗೆ ವಿಚಾರಣಾ ವರದಿಯನ್ನು 3 ತಿಂಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ವಿಚಾರಣಾಧಿಕಾರಿಗಳಿಗೆ ಸೂಕ್ತ ಸ್ಥಳಾವಕಾಶ, ಶೀಘ್ರಲಿಪಿಗಾರರ ಸೇವೆ ಹಾಗೂ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಾಮರಾಜನಗರ ಇವರು ಕ್ರಮ ಕೈಗೊಳ್ಳತಕ್ಕದ್ದು.

ವಿಚಾರಣಾಧಿಕಾರಿಗಳು ಇಲಾಖಾ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ/42/ಸೇಇವಿ/2014, ದಿನಾಂಕ:08-01-2015 ರನ್ವಯ ವಾಹನ ಭತ್ಯೆಯೂ ಸೇರಿದಂತೆ ರೂ.25,000/- ಗಳ ಸಂಭಾವನೆಯನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

22/6/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇ. ಬಿ&ಸಿ)(ಪ್ರ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1) ಪ್ರಧಾನ ಮಹಾಲೇಖಪಾಲರು (ಎ&ಇ)ರವರ ಕಾರ್ಯದರ್ಶಿ, ಕರ್ನಾಟಕ ಹೊಸಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂ-5329, ಬೆಂಗಳೂರು-560001.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಾಮರಾಜನಗರ.
3) ಉಪ ಕಾರ್ಯದರ್ಶಿ(ಆಡಳಿತ) ಜಿಲ್ಲಾ ಪಂಚಾಯತಿ, ಚಾಮರಾಜನಗರ(ವಿಚಾರಣಾಧಿಕಾರಿ).
4) ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಚಾಮರಾಜನಗರ(ಮಂಡನಾಧಿಕಾರಿ).
4) ಆಪಾದಿತ ನೌಕರರುಗಳಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿ.ಪಂ.ಚಿಕ್ಕಬಳ್ಳಾಪುರ ಇವರ ಮುಖಾಂತರ)

<u>ಪ್ರತಿಯನ್ನು:-</u>

1) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ಜಂಟಿ ಕಾರ್ಯದರ್ಶಿ (ಆಡಳಿತ), ಗ್ರಾ .ಅ. & ಪಂ.ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2) ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
3) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.